# ಪುಸ್ತಕ ಪರಿಚಯ

## ಯುಗಸಂಧ್ಯಾ
## (ಯುದ್ಧೋತ್ತರ ಮಹಾಭಾರತ ಕಾವ್ಯ)

ಲೇಖಕರು: ಸುಜನಾ
ಪ್ರಕಾಶಕರು: ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು ೫೭೦ ೦೦೪

**ಸುಜನಾ**, ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಶ್ರೀ ಎಸ್. ನಾರಾಯಣ ಶೆಟ್ಟಿ ಅವರು ಕನ್ನಡ ಸಾಹಿತ್ಯದ ಉತ್ತಮ ಬೋಧಕರಾಗಿ ಹೆಸರು ಮಾಡಿದವರು. ಅಧ್ಯಯನಶೀಲರೂ ಗಂಭೀರ ಚಿಂತಕರೂ ಆದ ಸುಜನಾ ಅವರು ಸಾಹಿತ್ಯಲೋಕಕ್ಕೆ ಶ್ರೇಷ್ಠ ವಿಮರ್ಶಾಕೃತಿಗಳನ್ನು ನೀಡಿದ್ದಾರೆ.

'ಕಾವ್ಯಕ್ಕೆ ನನ್ನನ್ನು ಒಪ್ಪಿಸಿಕೊಂಡದ್ದು'ನನ್ನ ಜೀವನದ ಅತ್ಯಂತ ಮಹತ್ವದ ನಿರ್ಣಯ ಎಂದು ಹೇಳುವ ಕವಿ ಸುಜನಾ ಅವರಿಗೆ, ಪಂಪ ಕುಮಾರವ್ಯಾಸರ ಬಗ್ಗೆ ವಿಶೇಷ ಒಲವು. **'ಯುಗಸಂಧ್ಯಾ'** ಯುದ್ಧೋತ್ತರ ಮಹಾಭಾರತದ ಕಥೆಯ ಬೃಹತ್ ಕಾವ್ಯ. ಸುಜನಾ ಅವರು ಹೇಳುವಂತೆ, 'ಎಚ್ಚರಗಣ್ಣಿನಿಂದ ಗಮನಿಸಿದಾಗ ಯುದ್ಧೋತ್ತರ ಮಹಾಭಾರತ ಕಥೆ ಆ ಮಹಾಕಾವ್ಯಕ್ಕೆ ಅರ್ಥಪೂರ್ಣವಾದ ಗಂಭೀರ ಮುಕ್ತಾಯವಾಗಿ ಒಪ್ಪಂದವಾಗಿ ಬರುತ್ತದೆ. ಧರ್ಮಾಧರ್ಮಗಳ ನಡುವಣ ಸ್ಪಷ್ಟ ಸಂಘರ್ಷವಾಗಿ ತೋರುವ ಈ ಕಥೆ ಅಷ್ಟು ಸರಳವಾದ ಅರ್ಥೈಕೆಗೆ ಒದಗಿಬರುವುದಿಲ್ಲ.'

ವಿಸ್ತೃತ ಸರಳರಗಳೆಯ ಛಂದಸ್ಸಿನಿಂದ ರಚಿಸಲ್ಪಟ್ಟಿರುವ 'ಯುಗಸಂಧ್ಯಾ'ನಲ್ವತ್ತೆಂಟು ಅಧ್ಯಾಯಗಳನ್ನು ಒಳಗೊಂಡಿರುವ ೪೨೫ ಪುಟಗಳ ಸುಂದರ ಕಾವ್ಯ. ಕವಿ ಪ್ರತಿ ಅಧ್ಯಾಯಕ್ಕೂ ಸೊಗಸಾದ ಶಿರೋನಾಮಗಳನ್ನು ಕೊಟ್ಟಿದ್ದಾರೆ. ಉದಾಹರಣೆಗೆ: 'ನಡೆದಷ್ಟೆ ತಿಳಿಯುವುದು, ನಡೆದಷ್ಟು ಉಳಿದಿಹುದು' 'ಚೋದ್ಯವಲ್ಲದುದಾವುದಿದೆ ಸೃಷ್ಟಿಯಲಿ?' 'ನಡೆದೆ ತೀರಿಸಬೇಕು ಅವರವರ ದಾರಿಗಳನವರೆ', 'ಕೊಂದರೊಬ್ಬನನು ಸಂದಿಹೋಗದು ಸತ್ಯ'

ತಾತ್ತ್ವಿಕ ಚಿಂತನೆಗಳಿಂದ, ಕಣ್ಣಿಗೆ ಕಟ್ಟುವ ಪಾತ್ರಚಿತ್ರಣಗಳಿಂದ ಕೂಡಿರುವ 'ಯುಗಸಂಧ್ಯಾ' ಓದುಗರನ್ನು ಭಿನ್ನವಾದ ಲೋಕಕ್ಕೆ ಒಯ್ಯುತ್ತದೆ. ಈ ಕಾವ್ಯ ನಿರ್ಮಿತಿಗೆ ಕವಿ ಹತ್ತುವರ್ಷಗಳ ದೀರ್ಘಕಾಲವನ್ನು ತೆಗೆದುಕೊಂಡಿದ್ದಾರೆ. ಕೃತಿಗೆ ಸಾರ್ಥಕ್ಯ ಲಭಿಸುವುದು ಸಹೃದಯರಿಂದಲ್ಲವೇ?

—ಎಸ್.ಎಸ್. ರಮೇಶ್, ಕನ್ನಡ ಉಪನ್ಯಾಸಕರು,
ಶ್ರೀರಾಮಕೃಷ್ಣವಿದ್ಯಾಶಾಲೆ, ಯಾದವಗಿರಿ, ಮೈಸೂರು.

## ಸಾಯಣ ಮಾಧವ ಪ್ರಣೀತ
## ಸರ್ವದರ್ಶನ ಸಂಗ್ರಹ

ಅನುವಾದ: ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು
ಪ್ರಕಾಶಕರು: ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ;
ಪುಟ: ೭೫೬ + lcxxi
ಬೆಲೆ ಸಾದಾ ಪ್ರತಿ: ೨೦೦ , ಉತ್ತಮ ಪ್ರತಿ : ೨೫೦

**ಭಾರತೀಯ** ದಾರ್ಶನಿಕರು ಜ್ಞಾನಸ್ವರೂಪದ ಪರೀಕ್ಷೆಯ ವಿಷಯದಲ್ಲಿ ವೈವಿಧ್ಯಮಯವಾದ ಹಾದಿಯನ್ನು ತೋರಿದ್ದಾರೆ. ಈ ಎಲ್ಲ ದರ್ಶನಗಳ ಪ್ರಮೇಯಗಳನ್ನೂ ಅವುಗಳ ಸಾರಸರ್ವಸ್ವವನ್ನೂ ಆದರಪುರಸ್ಸರವಾಗಿ ತಿಳಿಸಿಕೊಡುವ ಒಂದು ಅಪೂರ್ವ ಪ್ರಯತ್ನ ಸಾಯಣ-ಮಾಧವ ಪ್ರಣೀತ **'ಸರ್ವದರ್ಶನ ಸಂಗ್ರಹ'**ವೆಂಬ ಸಂಸ್ಕೃತ ಗ್ರಂಥ. ಎಲ್ಲ ದರ್ಶನಗಳ **ಸಾಧರ್ಮ್ಯ, ವೈಧರ್ಮ್ಯ** ವಿಚಾರಗಳ ಸಂಗ್ರಹ ಈ ಸಂಸ್ಕೃತ ಗ್ರಂಥದಲ್ಲಿದೆ. ಈ ಏಕೈಕ ಗ್ರಂಥವನ್ನು ಕನ್ನಡ ವಿದ್ವತ್ ಪ್ರಪಂಚಕ್ಕೆ ನೀಡಿರುವ ಕೀರ್ತಿ ಶ್ರೀ ಕುಂದೂರು ಮಠಾಧ್ಯಕ್ಷರಾದ ಪೂಜನೀಯ ಡಾ. ಶ್ರೀ ಶಿವಬಸವ ಸ್ವಾಮಿಗಳಿಗೆ ಸೇರುತ್ತದೆ.

ಸರಳವಾದ ಅನುವಾದ, ವಿವರವಾದ ಟಿಪ್ಪಣಿ, ವ್ಯಾಖ್ಯಾನ ಇವೆಲ್ಲವೂ ತಿಳಿಯಾದ ಕನ್ನಡದಲ್ಲಿ ಅನುವಾದಕರ ಅಸಾಧಾರಣ ಪ್ರತಿಭೆಯಿಂದ ಅಭಿವ್ಯಕ್ತವಾಗಿವೆ. ಗಹನವಾದ ತತ್ತ್ವಶಾಸ್ತ್ರವನ್ನು ಸೂಕ್ಷ್ಮವಾಗಿ ವಿವೇಚಿಸಿ, ಪ್ರಚಲಿತ ನ್ಯಾಯಗಳನ್ನು ಬಳಸಿ ಬುದ್ಧಿಯನ್ನು ಹಗುರಗೊಳಿಸುವ ಒಂದು ಪ್ರಾಮಾಣಿಕ ಪ್ರಯತ್ನವನ್ನು ಈ ಗ್ರಂಥದಲ್ಲಿ ನಾವು ಕಾಣಬಹುದಾಗಿದೆ. ಭಾರತದ ವಿವಿಧ ದರ್ಶನಗಳ ತಾತ್ತ್ವಿಕ ನಿಲುವನ್ನು ಒಂದೆಡೆ ಸಮಗ್ರವಾಗಿ ನಿರೂಪಿಸಿ ಉತ್ತಮವಾದ ಸಾಹಿತ್ಯದ ಮೂಲಕ ಪ್ರತಿಪಾದಿಸುವುದು ಒಂದು ಸವಾಲೇ ಸರಿ.

ಭಾರತೀಯ ದರ್ಶನಶಾಸ್ತ್ರದ ಅಧ್ಯಯನಶೀಲರಿಗೆ ಅತ್ಯುಪಯುಕ್ತವಾದ ಹಾಗೂ ಕನ್ನಡದಲ್ಲಿ ವೈಚಾರಿಕ ಮತ್ತು ದಾರ್ಶನಿಕ ಸಾಹಿತ್ಯವನ್ನು ಸಮೃದ್ಧಗೊಳಿಸಿರುವ ಒಂದು ಮಹತ್ತ್ವಪೂರ್ಣವಾದ ಗ್ರಂಥ ಇದು. ಈ ಗ್ರಂಥ ಮೊದಲು ೧೯೭೬ರಲ್ಲಿ ಪ್ರಕಟಿತಗೊಂಡಿದ್ದು ಕರ್ನಾಟಕ ವಿಶ್ವವಿದ್ಯಾನಿಲಯದ ಪಠ್ಯಪುಸ್ತಕದ ನಿರ್ದೇಶನಾಲಯದ ವತಿಯಿಂದ. ಇತ್ತೀಚೆಗೆ ಇದರ ಪ್ರತಿಗಳು ದೊರಕದಂತಾಗಿ ಈ ಕೃತಿಗೆ ಬೇಡಿಕೆ ಹೆಚ್ಚಾಗಿತ್ತು. ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠದ ಅಂಗಸಂಸ್ಥೆಯಾದ ಜೆ.ಎಸ್.ಎಸ್. ಗ್ರಂಥಮಾಲೆಯ ಪ್ರಕಾಶಕರು ಈ ಕೊರತೆಯನ್ನು ನೀಗಿಸಿದ್ದಾರೆ. ಆಕರ್ಷಕ ವಿನ್ಯಾಸದಲ್ಲಿ ಅಂದವಾಗಿ ಮುದ್ರಿತವಾಗಿರುವ ಈ ಬೃಹತ್ ಗ್ರಂಥ ಕನ್ನಡ ಸಾರಸ್ವತ ಪ್ರಪಂಚಕ್ಕೊಂದು ಅಪೂರ್ವ ಕೊಡುಗೆ.

— ವಿಜಯ ಕುಮಾರ

**'ಪುಸ್ತಕ ಪರಿಚಯ'**ಕ್ಕಾಗಿ ಪುಸ್ತಕಗಳನ್ನು ಕಳುಹಿಸುವ ಇಚ್ಛೆಯುಳ್ಳವರು ಎರಡು ಪ್ರತಿಗಳನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ.